# * ಶ್ರೀರಾಮಕೃಷ್ಣ ಭಕ್ತಸಮಾಜ *

## ಸ್ವಾಮಿ ಗೌತಮಾನಂದ

**ಬೆಂಗಳೂರಿನ ರಾಮಕೃಷ್ಣ ಮಠವು ತನ್ನ ಶತಮಾನೋತ್ಸವದ ಅಂಗವಾಗಿ ಡಿಸೆಂಬರ್ ೩೦, ೨೦೦೫ರಲ್ಲಿ ಆಯೋಜಿಸಿದ್ದ ಅಖಿಲ ಕರ್ನಾಟಕದ ರಾಮಕೃಷ್ಣ-ವಿವೇಕಾನಂದ ಭಕ್ತಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಪೂಜ್ಯ ಗೌತಮಾನಂದಜಿಯವರು ಮಾಡಿದ ಭಾಷಣದ ಸಂಗ್ರಹವನ್ನು ಇಲ್ಲಿ ನೀಡಲಾಗಿದೆ.**

ಪರಮಪೂಜ್ಯ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜ್, ಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್, ಪೂಜ್ಯ ಹರ್ಷಾನಂದಜಿ ಮತ್ತು ಇತರ ಸಂನ್ಯಾಸಿ ಸಹೋದರರೆ, ಹಾಗೂ ಪ್ರಿಯ ಸಹೋದರರೆ, ಸಹೋದರಿಯರೆ—ಈ ಐದನೆಯ ಅಖಿಲ ಕರ್ನಾಟಕ ರಾಮಕೃಷ್ಣ ವಿವೇಕಾನಂದ ಭಕ್ತ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ನನಗೆ ಬಹಳ ಸಂತೋಷವನ್ನು ನೀಡುತ್ತಿದೆ. ಇಂತಹ ಒಂದು ಶುಭ ಸಂದರ್ಭದಲ್ಲಿ ಸಾಧುಗಳ ಹಾಗೂ ಭಕ್ತರ ನಡುವೆ ಇದ್ದು ಶ್ರೀರಾಮಕೃಷ್ಣ-ವಿವೇಕಾನಂದರ ಜೀವನ ಹಾಗೂ ಸಂದೇಶಗಳನ್ನು ಕುರಿತಂತೆ ಹಲವಾರು ವಿಚಾರಗಳನ್ನು ಕೇಳುವಂತಹ ಭಾಗ್ಯ ನನ್ನದು ಎಂದು ಭಾವಿಸುತ್ತೇನೆ. ಇಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಹಿರಿಯ ಚಿಂತಕರು ಪ್ರವಚನಗಳನ್ನು ನೀಡಲಿದ್ದಾರೆ. ಇವೆಲ್ಲ ಶ್ರೀರಾಮಕೃಷ್ಣ ವಿವೇಕಾನಂದರ ಸಂದೇಶವನ್ನು ಹೊಸ ಹೊಸ ಆಯಾಮಗಳಿಂದ ಗುರುತಿಸಲು ನಮಗೆ ಅವಕಾಶವನ್ನು ನೀಡುತ್ತವೆ.

ಈಗ ತಾನೆ ೨೪, ೨೫ ಹಾಗೂ ೨೬ನೇ ತಾರೀಖುಗಳಂದು ನಟ್ಟರಂಪಲ್ಲಿಯಲ್ಲಿ ನಡೆದ ಹದಿಮೂರನೆಯ ಅಖಿಲ ತಮಿಳುನಾಡು ರಾಮಕೃಷ್ಣ-ವಿವೇಕಾನಂದ ಭಕ್ತಸಮ್ಮೇಳನದಲ್ಲಿ ಭಾಗವಹಿಸಿ ಬರುತ್ತಿದ್ದೇನೆ. ಅಲ್ಲಿ ಸುಮಾರು ೨,೫೦೦ ಜನ ಭಕ್ತರು ಭಾಗವಹಿಸಿದ್ದರು. ೧೫ನೇ ಅಖಿಲ ಆಂಧ್ರಪ್ರದೇಶ ರಾಮಕೃಷ್ಣ-ವಿವೇಕಾನಂದ ಭಕ್ತ ಸಮ್ಮೇಳನವು ೨೦೦೬ರ ಜನವರಿ ೬, ೭ ಹಾಗೂ ೮ರಂದು ಮಚಲೀಪಟ್ಟಣಂನಲ್ಲಿ ನಡೆಯಲಿದೆ. ಅಲ್ಲೂ ಕೂಡ ಸುಮಾರು ೨,೫೦೦-೩,೦೦೦ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ.

ಈ ಭಕ್ತಸಮ್ಮೇಳನಗಳಲ್ಲಿ ನಾವು ಕಾಣುವ ಒಂದು ವಿಶೇಷತೆ ಎಂದರೆ ಸಮಾಜದ ಎಲ್ಲ ಸ್ತರಗಳಿಂದಲೂ ಭಕ್ತರು ಶ್ರೀರಾಮಕೃಷ್ಣರ ಹೆಸರಿನಲ್ಲಿ ಒಂದೆಡೆ ಸೇರಿ ಕಲೆತು, ಒಂದೇ ಕುಟುಂಬದಂತೆ ಪ್ರೀತಿ ಅನ್ಯೋನ್ಯತೆಗಳಿಂದ, ಯಾವುದೇ ಭೇದವಿಲ್ಲದೆ ಪಾಲ್ಗೊಳ್ಳುವುದು. ರೈತರು, ಬೆಸ್ತರು, ಶ್ರಮಿಕರು ಇವರುಗಳಿಂದ ಹಿಡಿದು ಪಂಡಿತರು, ಪ್ರಾಧ್ಯಾಪಕರು, ಇಂಜಿನಿಯರುಗಳು, ಡಾಕ್ಟರರು—ಎಲ್ಲರೂ ಶ್ರೀರಾಮಕೃಷ್ಣರ ಒಂದು ವಿಶಾಲ ಭಕ್ತಕುಟುಂಬದಂತೆ ಸೇರುತ್ತಾರೆ. ತನ್ಮೂಲಕ ಶ್ರೀರಾಮಕೃಷ್ಣರ "ಭಕ್ತರಲ್ಲಿ ಯಾವುದೇ ಭೇದವಿಲ್ಲ" ಎಂಬ ಉಕ್ತಿಯು ಸಾಕಾರಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಒಂದು ಮಹಾನ್ ಭಕ್ತಸಮಾಜದ ನಿರ್ಮಾಣವೇ ಒಂದು ಮುಖ್ಯ ಆವಶ್ಯಕತೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಚಾರದಲ್ಲಿ ಸ್ವಲ್ಪ ಮಾಹಿತಿ ನೀಡುವ ಉದ್ದೇಶದಿಂದ ಕೆಲವು ಅಂಶಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

**೧. ಭಕ್ತ ಸಮ್ಮೇಳನದ ಆವಶ್ಯಕತೆ** : ಕಳೆದ ಒಂದು ಸಾವಿರ ವರ್ಷಗಳ ದಾಸ್ಯದಿಂದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಎಲ್ಲ ರೀತಿಯ ಶಕ್ತಿಗಳನ್ನೂ ಕಳೆದುಕೊಂಡು ಕೇವಲ "ದೇವರಿದ್ದಾನೆ, ಅವನನ್ನು ನೋಡಬೇಕು. ಅವನು ನಮ್ಮ ಧರ್ಮವನ್ನೂ, ನಮ್ಮನ್ನೂ ಕಾಪಾಡುತ್ತಾನೆ. ಅವನು ನಿಶ್ಚಯವಾಗಿಯೂ ಬರುತ್ತಾನೆ", ಎಂಬ ಅಧ್ಯಾತ್ಮಿಕ ಬಯಕೆ, ಶ್ರದ್ಧೆ ಮಾತ್ರ ನಮ್ಮ ಭಾರತೀಯರಲ್ಲಿ ಉಳಿದುಕೊಂಡಿತ್ತು. ಈ ಆಸೆಯು ಅಳಿದುಹೋದರೆ ಭಾರತೀಯ ಜನಾಂಗವೇ ಅಳಿದು ಹೋಗುವುದು, ಪ್ರಪಂಚಕ್ಕೆಲ್ಲ ಈ ದೇಶ ನೀಡುತ್ತಿರುವ ಆಧ್ಯಾತ್ಮಿಕ ನಂದಾದೀಪವೇ ನಂದಿಹೋಗುವುದು ಎಂದೋ ಏನೋ ಭಗವಂತನು ಶ್ರೀರಾಮಕೃಷ್ಣರಾಗಿ, ತಮ್ಮ 'ಶಕ್ತಿ' ಶಾರದೆಯ ಜೊತೆಗೆ, ತಮ್ಮ 'ಉತ್ಸವ ಮೂರ್ತಿ'—ಸಂದೇಶವಾಹಕ ನರೇಂದ್ರನನ್ನೂ ಕೂಡ ತಮ್ಮೊಡನೆ ಕರೆತಂದು ಅವತರಿಸಿದರು; ತಮ್ಮ ಅದ್ಭುತ ಸಾಧನೆಗಳಿಂದಲೂ, ಸಿದ್ಧಿಗಳಿಂದಲೂ 'ಸನಾತನ ಧರ್ಮ'ವನ್ನು ಮತ್ತೆ ಸ್ಥಾಪಿಸುವ ಕೆಲಸವನ್ನು ಆರಂಭಿಸಿದರು.

ಈ ಕೆಲಸ ಮುಂದುವರೆಯಲಿದ್ದು, ಮುಂದಿನ ಶತಮಾನದೊಳಗೆ ಕೇವಲ ಭಾರತ ಮಾತ್ರವಲ್ಲ, ಇಡೀ ವಿಶ್ವದಲ್ಲೆಲ್ಲ ಅವರ ಈ 'ಸರ್ವಧರ್ಮಸಮನ್ವಯ' ರೂಪದ ಸನಾತನ ಧರ್ಮ ಅಥವಾ ವೇದಾಂತ ಧರ್ಮವು ಹರಡಲಿದೆ. ಶ್ರೀರಾಮಕೃಷ್ಣರ ಈ ಅದ್ಭುತ ಸಂದೇಶವೇ ಜಗತ್ತಿಗೆ ಶಾಂತಿಯನ್ನು, ಧರ್ಮಗಳ ನಡುವಣ ಬಾಂಧವ್ಯವನ್ನು ತರಬಲ್ಲುದು ಎಂದು ಆಧುನಿಕ ಚಿಂತಕರೆಲ್ಲ ಹೇಳುತ್ತಿದ್ದಾರೆ. "ಎಲ್ಲೆಲ್ಲಿ ಅವರ ಹೆಸರು ಹಬ್ಬುವುದೋ, ಅಲ್ಲೆಲ್ಲ ಮನುಷ್ಯನ ಧರ್ಮಬುದ್ಧಿ

ವರ್ಧಿಸುವುದು. ಇಹ ಪರ ಎರಡರಲ್ಲೂ ಸುಖ ಶಾಂತಿ ಸಾಧಿತವಾಗುವುದು ನಿಶ್ಚಯ", ಎಂಬ ವಿಚಾರವನ್ನು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಆದ್ದರಿಂದ ಇಹ ಪರಗಳಲ್ಲಿ ಶಾಂತಿಯನ್ನು ಅರಸುತ್ತಿರುವ ನಾವು ಶ್ರೀರಾಮಕೃಷ್ಣರ ಜೀವನವನ್ನು ತಿಳಿಯುವುದು, ಅವರ ಉಪದೇಶಗಳನ್ನು ಸರಿಯಾಗಿ ಗ್ರಹಿಸುವುದು ಆವಶ್ಯಕ. ಇದರೊಂದಿಗೆ ನಮ್ಮ ಜೀವನದಲ್ಲಿ ಕೃತಕೃತ್ಯರಾಗುವುದರೊಂದಿಗೆ, ಅವರ ಅಮೃತ ಸಂದೇಶವನ್ನು ನಮ್ಮ ನಾಡು, ದೇಶ, ಪ್ರಪಂಚದೆಲ್ಲೆಡೆ ಹರಡುವ ಪ್ರಯತ್ನವನ್ನು ಮಾಡಬೇಕು ಎಂದು ಶ್ರೀರಾಮಕೃಷ್ಣರೇ ಬಯಸಿದ್ದನ್ನು ಸ್ವಾಮಿ ವಿವೇಕಾನಂದರು ನಮಗೆ ಮತ್ತೆ ಮತ್ತೆ ಹೇಳಿದ್ದಾರೆ. **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂದರೆ ನಮ್ಮ ಸ್ವಂತ ಮೋಕ್ಷಕ್ಕಾಗಿ ಹಾಗೂ ಪರರ ಸುಖಕ್ಕಾಗಿ ಬಾಳುವುದೇ ನಮ್ಮ ಈಗಿನ ಕರ್ತವ್ಯವಾಗಿದೆ ಎಂದಿದ್ದಾರೆ ಸ್ವಾಮೀಜಿ. ಈ ಕರ್ತವ್ಯವನ್ನು ನಿರ್ವಹಿಸಲು ನಮಗೆ ಶಿಕ್ಷಣ, ತರಬೇತಿ ಬೇಕು. ಅಂತಹ ತರಬೇತಿಗೆಂದೇ ಈ ವಿಶಾಲ ಭಕ್ತ ಸಮ್ಮೇಳನಗಳ ಆಯೋಜನೆ.

**೨. ಭಕ್ತಸಮ್ಮೇಳನಗಳ ಆರಂಭ** : ವೇದಾಂತದ ತಳಹದಿಯ ಮೇಲೆ ನಿಂತಿರುವ ಈ ಹೊಸ ಜೀವನವಿಧಾನವು ಶ್ರೀರಾಮಕೃಷ್ಣರಿಂದಲೇ ಪ್ರಾರಂಭವಾಯಿತು. ಭಕ್ತನಾದ ನವಗೋಪಾಲನ ಮಡದಿ ನಿಸ್ತಾರಿಣೀ ದೇವಿಗೆ ತಾವೇ ಭಾವಚಿತ್ರವನ್ನು ಕೊಟ್ಟು ಕಳುಹಿಸಿದರು! "ಇದು ಗಾಡಿಗಳಲ್ಲಿ, ಮನೆಗಳಲ್ಲಿ, ಹಡಗುಗಳಲ್ಲಿ, ಎಲ್ಲೆಲ್ಲೂ ವಿರಾಜಿಸುತ್ತದೆ!" ಎಂದು ಭವಿಷ್ಯದ್ವಾಣಿ ನುಡಿದರು. ಬಲರಾಮ ಬೋಸನ ಮನೆ, ರಾಮಚಂದ್ರ ದತ್ತನ ಮನೆ ಇವೇ ಮುಂತಾದ ಸ್ಥಳಗಳಲ್ಲಿ ಭಕ್ತರೆಲ್ಲ ಕಲೆಯುವಂತೆ ಮಾಡಿ ತಮ್ಮ ಉಪದೇಶಾಮೃತವನ್ನು ನೀಡಿದರು. ಶ್ರೀಮಾತೆ ಶಾರದಾದೇವಿ, ಯೋಗಿನ್ ಮಾ, ಗೋಲಾಪ್ ಮಾ, ಗೋಪಾಲೇರ್ ಮಾ—ಇವರುಗಳ ಮೂಲಕ ಸ್ತ್ರೀಸಮೂಹದ ಮಧ್ಯೆ ಈ ಹೊಸ ವಿಚಾರಗಳ ಪ್ರಚಾರ ನಡೆಯಿತು. ನರೇನ್, ರಾಖಾಲ್ ಮುಂತಾದ ತಮ್ಮ ಅಂತರಂಗ ಶಿಷ್ಯರನ್ನೆಲ್ಲ ಕಾಶೀಪುರದಲ್ಲಿ ಪ್ರೀತಿಯ ಬೆಸುಗೆಯಿಂದ ಒಗ್ಗೂಡಿಸುವುದರ ಮೂಲಕ ಪ್ರಪಂಚದೆಲ್ಲೆಡೆ ಈ ಪಾವನವಾದ ಸಂದೇಶವನ್ನು ಸಂಘಟಿತವಾಗಿ ಹರಡುವ ಶ್ರೀರಾಮಕೃಷ್ಣ ಮಠದ ಶಂಕುಸ್ಥಾಪನೆಯನ್ನು ಮಾಡಿದರು.

**೩. ಶ್ರೀರಾಮಕೃಷ್ಣರು ನಮ್ಮಿಂದ ಏನನ್ನು ನಿರೀಕ್ಷಿಸುತ್ತಾರೆ?** : ವೇದ ವೇದಾಂತಗಳ ಧರ್ಮದ ಸಾರವನ್ನು ಯಾವ ಸರಳ ರೀತಿಯಲ್ಲಿ ಅವರು ಹೇಳಿದ್ದಾರೆಯೋ ಅದನ್ನು ತಿಳಿದುಕೊಳ್ಳಬೇಕು, ಅದರಂತೆ ನಡೆಯಲು ಪ್ರಯತ್ನಿಸಬೇಕು. ಅವರ ಜೀವನವನ್ನೇ ಮಾದರಿಯಾಗಿ ಇಟ್ಟುಕೊಂಡು ನಡೆದಾಗ ಅವರಿಂದ ಎಲ್ಲ ಬೆಂಬಲ, ಸ್ಫೂರ್ತಿ ಸಿಗುವುದು. ನಮಗೆ ಜೀವನದಲ್ಲಿ, ಇಹ ಪರ ಎರಡರಲ್ಲೂ, ಸಫಲತೆ ದೊರೆತೇ ದೊರೆಯುವುದು. "ನಾನು ಎರಕವನ್ನು / ಮಾದರಿಯನ್ನು ಬಿಟ್ಟುಹೋಗುವೆ. ನೀವು ಅದರಂತೆ ನಿಮ್ಮ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿ" ಎಂದು ಶ್ರೀರಾಮಕೃಷ್ಣರು ಹೇಳಿದ್ದಾರೆ.

**೪. ಶ್ರೀರಾಮಕೃಷ್ಣರು ಏನು ಹೇಳುತ್ತಾರೆ? :**

* **ಜೀವನದ ಗುರಿ ಪರಮಾತ್ಮನನ್ನು ಕಾಣುವುದು. ಹಣ, ಕಾಸು, ಹೆಸರು, ಕೀರ್ತಿಗಳನ್ನು ಬಯಸುವುದಲ್ಲ.**
* **ಆದ್ದರಿಂದ ಧರ್ಮವನ್ನು ಬಿಡದೆ, ಹಣ, ಕಾಸು, ಹೆಸರು, ಕೀರ್ತಿಗಳನ್ನು ಗಳಿಸಬೇಕು.**
* **ಆಗ ಧರ್ಮದಿಂದ ಭಗವಂತನೂ ಸಿಗುತ್ತಾನೆ; ಅದೇ ಧರ್ಮದಿಂದ ಬಂದ ಹಣ, ಕಾಸು, ಕೀರ್ತಿಗಳಿಂದ ಈ ಜಗತ್ತಿನಲ್ಲೂ ಸುಖ, ಶಾಂತಿ ದೊರೆಯುವುವು.**
* **ಹಾಗಾದರೆ ಧರ್ಮ ಎಂದರೇನು? ಸತ್ಯ, ಪವಿತ್ರತೆ, ನಿಃಸ್ವಾರ್ಥ ಸೇವೆಗಳ ಮೂಲಕ ವೈರಾಗ್ಯ, ವ್ಯಾಕುಲತೆಗಳನ್ನು ಬೆಳೆಸಿಕೊಂಡು, ಭಗವಂತನನ್ನು ಹೃತ್ಪೂರ್ವಕವಾದ ಪ್ರಾರ್ಥನೆ, ಜಪಗಳ ಮೂಲಕ ಕಾಣುವುದು.**
* **ಇದು ಗೃಹಸ್ಥರಿಗೆ, ಸರ್ವಸಾಮಾನ್ಯರಿಗೆ ಶ್ರೀರಾಮಕೃಷ್ಣರು ಕೊಟ್ಟಿರುವ ಅತ್ಯಂತ ಸರಳವೂ, ಸುಲಭವೂ ಆದ ಮಾರ್ಗ ಇದೇ ಯುಗಧರ್ಮ.**

**೫. ಈ ಸಾಧನೆಗೆ ಬಹಳ ಮುಖ್ಯವಾದ ಸಹಾಯಕ ಅಂಶವೇ 'ಸತ್ಸಂಗ'** : ಸತ್ಸಂಗ ಅಂದರೆ ಸಜ್ಜನರ, ಭಕ್ತರ ಕೂಟ. ಅದನ್ನು ಸೇರಿ, ಅವರಿಂದ ಧರ್ಮದ ಆಚರಣೆಯನ್ನು ಕಲಿಯಬಹುದು. ಅವರೆಲ್ಲ ಸತ್ಯ, ಧರ್ಮ, ಭಕ್ತಿ, ಮುಕ್ತಿಗಳಿಗೆ ಒಂದು ಜೀವಂತ ಉದಾಹರಣೆಯಾಗಿ, ರೋಲ್ ಮಾಡೆಲ್ ಆಗಿ ಬೆಳಗುತ್ತಾರೆ. ಅವರ ಸಂಗದಿಂದ ನಮಗೆ ಆಧ್ಯಾತ್ಮಿಕ ಜೀವನದಲ್ಲಿ ನಂಬಿಕೆ, ಧೈರ್ಯ, ಉತ್ಸಾಹಗಳು ಸಹಜವಾಗಿಯೇ ಬರುತ್ತವೆ. ಉದಾಹರಣೆಗೆ, ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವ ವ್ಯಕ್ತಿಗೆ ಇತರರು ಈಜುತ್ತಿರುವುದನ್ನು ಕಂಡು ಭರವಸೆ ಮೂಡುತ್ತದೆಯಲ್ಲವೆ? ಈ ಸಾಧುಸಂಗವು ನಮಗೆಲ್ಲ ದೊರೆಯುವುದಕ್ಕಾಗಿಯೇ ಈ ಭಕ್ತ ಸಮ್ಮೇಳನದ ಆಯೋಜನೆ.

**೬. "ಗುರುಸೇವೆಯಿಂದ ಚಿತ್ತಶುದ್ಧಿ, ಭಕ್ತಿ, ಜ್ಞಾನಗಳು ದೊರೆಯುತ್ತವೆ"**, ಎನ್ನುತ್ತಾರೆ ಕಬೀರದಾಸರು. ಪುರಂದರ ದಾಸರು ಕೂಡ, "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ. ರಾಮಕೃಷ್ಣ ಮಠಗಳಲ್ಲಿರುವ ಸ್ವಾಮಿಗಳು, ಭಕ್ತರುಗಳ ಸಮುದಾಯವೇ, ಅಂದರೆ, ಶ್ರೀರಾಮಕೃಷ್ಣ ಸಂಘವೇ ಶ್ರೀರಾಮಕೃಷ್ಣರ ಸ್ಥೂಲಶರೀರ. "ಸಂಘದ ಸೇವೆ ಮಾಡಿದರೆ, ಅವರ ಸೇವೆ ಮಾಡಿ

ದಂತೆಯೇ", ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಇಂತಹ ಒಂದು ಅವಕಾಶ ಇಂದು ಭಕ್ತಸಮ್ಮೇಳನದ ಮೂಲಕ ನಿಮಗೆ ಸಿಕ್ಕಿದೆ. ಪರಸ್ಪರ ಒಳ್ಳೆಯ ವಿಚಾರಗಳನ್ನು ತಿಳಿಸುವುದೂ ಒಂದು ಸೇವೆಯೇ. ಇಲ್ಲಿ ನೆರೆದಿರುವವರಿಗೆಲ್ಲ ಭಕ್ತಿ, ಜ್ಞಾನಗಳು ದೊರೆತು ಶಾಂತಿಯನ್ನು ಅನುಭವಿಸಲಿ ಎಂದು ಪ್ರಾರ್ಥಿಸುವುದೂ ಸೇವೆಯೇ.

೭. **ಶ್ರೀರಾಮಕೃಷ್ಣ ಪ್ರಣೀತ ವೇದಾಂತದ ಹೊಸ ಜೀವನ ವಿಧಾನವು** ಹೊಸ ಸಮಾಜವೊಂದಕ್ಕೆ ಜನ್ಮ ನೀಡುತ್ತದೆ. ಈ ವಿಚಾರಗಳು ಹೊಸ ಸಮಾಜ, ಹೊಸದಾದ ಸಂಸ್ಕೃತಿ, ರಾಜನೈತಿಕ ವ್ಯವಸ್ಥೆ,ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆಗಳನ್ನು ಹುಟ್ಟುಹಾಕಿ, ಹೊಸ ಯುಗದ ಸೃಷ್ಟಿಯಾಗುತ್ತಿದೆ. ಸ್ವಾಮಿ ವಿವೇಕಾನಂದರು ಹೇಳಿದ್ದಾರೆ: "ಶ್ರೀರಾಮಕೃಷ್ಣರ ಜನ್ಮದಿಂದಲೇ ಹೊಸ ಯುಗ ಎಂದರೆ ಸತ್ಯಯುಗ ಹುಟ್ಟಿದೆ"— ಈ ಸತ್ಯಯುಗದಲ್ಲಿ ಎಲ್ಲ ವಿಧವಾದ ಭೇದಭಾವಗಳೂ ದೂರವಾಗಿ, ಇಡೀ ಮಾನವ ಸಮಾಜದಲ್ಲಿ ಸಮತೆ, ಸಮಾನತೆ ನೆಲೆಸುತ್ತವೆ. ಮತಮತಗಳ, ಜಾತಿಜಾತಿಗಳ, ಪುರುಷರ ಸ್ತ್ರೀಯರ, ಬಡವ ಬಲ್ಲಿದರ, ಪೌರಸ್ತ್ಯ ಪಾಶ್ಚಾತ್ಯಗಳ ಭೇದಗಳು ಕ್ಷೀಣವಾಗುವುವು. ಸತ್ಯಯುಗವು ಮೂಡಿದ ಕಡೆಯಲ್ಲೆ ಪ್ರೀತಿ, ಒಗ್ಗಟ್ಟು, ಸಹಯೋಗಗಳು ತುಂಬಿದ ಸಮಾಜ ಸೃಷ್ಟಿಯಾಗಿ ಸುಖ, ಶಾಂತಿ ನೆಲೆ ನಿಲ್ಲುವುವು. ಈ ಯುಗಧರ್ಮವನ್ನು ತಡೆಹಿಡಿಯುವುದು ಅಥವಾ ಅವತಾರ ಪುರುಷನ ಕಾರ್ಯಕ್ಕೆ ಅಡ್ಡಿ ಒಡ್ಡುವುದು ಯಾರಿಂದಲೂ ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ನಾವು ಕೆಲಸ ಮಾಡಿದಾಗ ಸುಖ, ಶಾಂತಿ, ಶ್ರೇಯಸ್ಸು ನಮ್ಮದಾಗುತ್ತದೆ. ಇದನ್ನು ಇಲ್ಲಿ ನೆರೆದಿರುವ ಎಲ್ಲರೂ ಗಮನದಲ್ಲಿಡಬೇಕು. ಶ್ರೀರಾಮಕೃಷ್ಣರ ಸಂಘಕ್ಕೆ, ಅವರ ಈ ಸ್ಥೂಲಶರೀರಕ್ಕೆ, ನೋವು ಉಂಟಾಗುವಂತಹ ಯಾವುದೇ ಕೆಲಸದಲ್ಲೂ ನೀವು ತೊಡಗಬಾರದು. ಅದರಿಂದ ಉಂಟಾಗುವ ಅನಾಹುತವನ್ನು ಊಹಿಸುವುದೂ ಅಸಾಧ್ಯ. ಪೂಜ್ಯ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಒಂದು ಪತ್ರದಲ್ಲಿ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಶಕ್ತಿಯನ್ನು ಕುರಿತು ಹೇಳಿದ್ದಾರೆ: **ಕುರ್ಮಸ್ತಾರಕ ಚರ್ವಣಂ ತ್ರಿಭುವನಮ್ ಉತ್ಪಾಟಯಾಮಃ ಬಲಾತ್ ... ರಾಮಕೃಷ್ಣ ದಾಸಾ ವಯಂ** —ಶ್ರೀರಾಮಕೃಷ್ಣರ ದಾಸರು ನಾವು. ನಕ್ಷತ್ರಗಳನ್ನೂ ಧೂಳೀಪಟ ಮಾಡುವೆವು, ಜಗತ್ತನ್ನೇ ಅಲುಗಾಡಿಸುವೆವು (ಕೃತಿಶ್ರೇಣಿ, ಸಂ.೪; ಪು.೧೮೩). ಈ ವಾಕ್ಯಗಳು ಯುಗಾವತಾರನ, ಯುಗಧರ್ಮದ ಶಕ್ತಿ, ಮಹಿಮೆಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ.

೮. **'ಶಿವಜ್ಞಾನೇ ಜೀವಸೇವಾ'** ಒಂದು ಪ್ರಸಿದ್ಧ ಆಧ್ಯಾತ್ಮಿಕ ಸಾಧನೆಯಾಗುವುದು. ಇದರ ಮೂಲಕ ಮೂರ್ಖದೇವೋ ಭವ, ದರಿದ್ರ ದೇವೋ ಭವ ಇವುಗಳು ಅನುಷ್ಠಾನಕ್ಕೆ ಬಂದು, ಸಮಾಜದಲ್ಲಿ ಜ್ಞಾನ, ವಿದ್ಯೆ, ಸಂಪತ್ತು ಸುಖಗಳು ತುಂಬಿ ತುಳುಕುತ್ತವೆ. ಈ ಆದರ್ಶವನ್ನು ಕಲಿಯುವ ಅವಕಾಶವೂ ಇಲ್ಲಿ ಪೂರ್ತಿಯಾಗಿ ದೊರೆಯುತ್ತದೆ. ಇಲ್ಲಿ ನೆರೆದಿರುವ ನಾವೆಲ್ಲ ಈ ಮೂರು ಆದರ್ಶಗಳನ್ನು—ಶಿವಜ್ಞಾನೇ ಜೀವ ಸೇವಾ, ಮೂರ್ಖ ದೇವೋ ಭವ, ಹಾಗೂ ದರಿದ್ರ ದೇವೋ ಭವ—ವ್ರತಗಳನ್ನಾಗಿ ಧರಿಸಬೇಕು. ಇದಕ್ಕಾಗಿ ಈ ಭಕ್ತ ಸಮ್ಮೇಳನ.

೯. ಶ್ರೀರಾಮಕೃಷ್ಣರು ಮೇಲಿನ **'ವ್ರತಧಾರಿಗಳಿಗೆ'** ಎಲ್ಲ ಬೆಂಬಲವನ್ನೂ ಕೊಡುತ್ತಾರೆ. "ಅಂತಹವರ ಬಾಯಿಂದ ಸರಸ್ವತಿಯೇ ಉಲಿಯುತ್ತಾಳೆ, ಅವರ ಬಾಹುಗಳಿಂದ ದುರ್ಗೆಯೇ ಕೆಲಸ ಸಾಧಿಸುತ್ತಾಳೆ", ಎಂದು ಸ್ವಾಮಿ ವಿವೇಕಾನಂದರು ಬರೆದಿದ್ದಾರೆ! ನಿಮ್ಮ ಬಂಧುಬಾಂಧವರಿಗೆ, ಮಕ್ಕಳು ಮೊಮ್ಮಕ್ಕಳಿಗೆ, ನೆರೆಹೊರೆಯವರಿಗೆ, ಧರ್ಮದಿಂದ ಬಾಳಿ, ಇಹ ಪರ ಎರಡನ್ನೂ ಸಾಧಿಸಿಕೊಳ್ಳಿ ಎಂದು ತಿಳಿಸಿ. ಬರಿಯ ಅರ್ಥ ಕಾಮಗಳಿಂದ ಹಾಳಾಗುತ್ತಿರುವ ಆಧುನಿಕತೆಯನ್ನು ಹತೋಟಿಗೆ ತಂದು, ಆಧುನಿಕ ವಿಜ್ಞಾನ ವಿಚಾರಶೀಲತೆಗಳನ್ನೂ ರೂಢಿಸಿಕೊಳ್ಳುತ್ತ; ಆಧ್ಯಾತ್ಮಿಕ ಕೇಂದ್ರವುಳ್ಳ ಧರ್ಮ ಅರ್ಥ ಕಾಮ ಮೋಕ್ಷಗಳು ಬಂಧಿಸಲಾರವು ಎಂಬ ಸತ್ಯವನ್ನು ಅರಗಿಸಿಕೊಳ್ಳಿ.

೧೦. **ಇದನ್ನು ಜೀವನದಲ್ಲಿ ನಡೆದು ತೋರಿಸಿದ ದಿವ್ಯತ್ರಯರ,** ಅವರ ಸನ್ಯಾಸಿ ಶಿಷ್ಯರ, ಪ್ರಶಿಷ್ಯರ, ಗೃಹಸ್ಥ ಶಿಷ್ಯರ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಅವುಗಳ ಅಧ್ಯಯನ ನಮಗೆ ಸಾಕಷ್ಟು ಬೆಳಕನ್ನೂ, ಹುರುಪನ್ನೂ ಕೊಡುತ್ತದೆ. ಅವುಗಳನ್ನು ತಿಳಿಯಲೂ ನೀವುಗಳು ಇಲ್ಲಿಗೆ ಬಂದಿದ್ದೀರಿ.

೧೧. **ಹೊಸ ಜೀವನವಿಧಾನವನ್ನು ನೇರವಾಗಿ ಗುರುಶಿಷ್ಯ ಪರಂಪರೆಯ** ಮೂಲಕ ನಮಗೆ ಕಲಿಸುತ್ತಿರುವ ರಾಮಕೃಷ್ಣ ಮಹಾಸಂಘದ ಜೊತೆ ನಿಮಗೆ ಸಂಪರ್ಕ ಲಭಿಸಿದೆ. ಇದನ್ನು ಉಳಿಸಿಕೊಳ್ಳಿ. ಯುಗಾವತಾರ ಶ್ರೀರಾಮಕೃಷ್ಣರ ಚೈತನ್ಯಕಾರಿ ಉಪದೇಶಗಳು ನೇರವಾಗಿ, ಯಾವುದೇ ಮಾರ್ಪಾಟಿಲ್ಲದೆ, ಎಳ್ಳಷ್ಟೂ ಬದಲಾಗದೆ ಶುದ್ಧ ಸ್ವರೂಪದಲ್ಲಿ ನಿಮಗೆ ಇಲ್ಲಿ ದೊರಕುತ್ತವೆ. ಇದರಿಂದ ನಿಮ್ಮ ಜೀವನ ಸುಲಭವಾಗಿ ಧರ್ಮಮಯವಾಗಬಲ್ಲದು.

೧೨. **"ಭಾರತದ ಉದ್ಧಾರಕ್ಕಾಗಿಯೇ ಶ್ರೀರಾಮಕೃಷ್ಣರು ಜನ್ಮ ತಾಳಿದ್ದಾರೆ"**ಎಂದಿದ್ದಾರೆ ಸ್ವಾಮಿ ವಿವೇಕಾನಂದರು. "ಭಾರತದ ಆಧ್ಯಾತ್ಮಿಕತೆಯ ಪ್ರವಾಹವು ಪ್ರಪಂಚವನ್ನೆಲ್ಲ ವ್ಯಾಪಿಸಿ ದಿವ್ಯಪಥದಲ್ಲಿ ಮುಂದುವರೆಯುವಂತೆ ಮಾಡುತ್ತದೆ"

ಎಂದೂ ಹೇಳಿದ್ದಾರೆ. "ಹಿಂದಿನ ಕಾಲದ ಭಾರತದಲ್ಲಿ ನೂರಾರು ಋಷಿಗಳಿದ್ದರು. ಮುಂದಿನ ಕಾಲದಲ್ಲಿ ಲಕ್ಷಾಂತರ ಋಷಿಗಳು ಬರುತ್ತಾರೆ." ಸರ್ವೋತ್ಕೃಷ್ಟ ಋಷಿವರ್ಯ, ನರಋಷಿ ವಿವೇಕಾನಂದರ ಮಾತುಗಳಿವು. "ನೀವೆಲ್ಲ ಋಷಿಗಳಾಗಬಲ್ಲಿರಿ; ಆಗಲೇಬೇಕು" ಎಂದೂ ಹರಸಿದ್ದಾರೆ.

೧೩. ಅಂಥ ವಿವೇಕಾನಂದರ ಋಷಿವಾಕ್ಯಗಳು ಸತ್ಯವಾಗಿಯೇ ತೀರುತ್ತವೆ. ಸತ್ಯಯುಗವನ್ನು ಸೃಷ್ಟಿಮಾಡಿಯೇ ತೀರುತ್ತವೆ. ಅವರ ಅಮೋಘ ಸಂಕಲ್ಪ ಆಗಿಹೋಗಿದೆ. ನಾವು ನಿಮಿತ್ತ ಮಾತ್ರ; ಸ್ವಲ್ಪ ಪ್ರಯತ್ನಿಸಿದರೆ ಸಾಕು, ಗೀತೆಯಲ್ಲಿ ಭಗವಂತ ಹೇಳುವಂತೆ **ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್**—ಹೇ ಅರ್ಜುನ, ನೀನು ಕೇವಲ ನಿಮಿತ್ತ ಮಾತ್ರ. ಇಂತಹ ಅಹಂಕಾರರಹಿತ ಭಾವನೆಯಿಂದ ನಮಗೆ ಭುಕ್ತಿ, ಮುಕ್ತಿ ಎರಡೂ ಸಿಕ್ಕುವುವು. ನಮ್ಮ ನಾಡು ಮಾತ್ರವಲ್ಲ, ಪ್ರಪಂಚವೂ ಶಾಂತಿ ಹಾಗೂ ಸುಖವನ್ನು ಪಡೆಯುವುದು. ಇದಕ್ಕಾಗಿ, ನಾವು ಮಾಡಬೇಕಾಗಿರುವ ಈ ಅಳಿಲು ಸೇವೆಗಾಗಿ, ಅದಕ್ಕೆ ಬೇಕಾದ ತರಬೇತಿಗಾಗಿ ನೀವೆಲ್ಲ ಇಲ್ಲಿ ಬಂದಿದ್ದೀರಿ.

೧೪. ಮೇಲೆ ಹೇಳಿದ ಉದ್ದೇಶಗಳನ್ನು ಇಟ್ಟುಕೊಂಡು ಶ್ರೀರಾಮಕೃಷ್ಣ ಮಠ ಮತ್ತು ಮಿಷನ್‌ಗಳ ನೂರೈವತ್ತಕ್ಕಿಂತಲೂ ಹೆಚ್ಚು ಶಾಖೆಗಳು ಸ್ಥಾಪಿಸಲ್ಪಟ್ಟಿವೆ. ಹಾಗೆಯೇ ಹಲವಾರು ಭಕ್ತರು ಚಿಕ್ಕ, ದೊಡ್ಡ ಸಂಸ್ಥೆಗಳ ಸ್ಥಾಪನೆಯ ಮೂಲಕ ಶ್ರೀರಾಮಕೃಷ್ಣರ ಶ್ರೀಶಾರದಾದೇವಿಯವರ, ಸ್ವಾಮಿ ವಿವೇಕಾನಂದರ ಭಾವಪ್ರಚಾರವನ್ನು ಮಾಡುತ್ತಿದ್ದಾರೆ. ಇವುಗಳನ್ನು "ಶ್ರೀರಾಮಕೃಷ್ಣ ಖಾಸಗಿ ಸಂಸ್ಥೆ"ಗಳೆಂದು ನಾವು ಕರೆಯುತ್ತೇವೆ. **ಸಂಘೇ ಶಕ್ತಿಃ ಕಲೌ ಯುಗೇ**—ಈ ಕಲಿಯುಗದಲ್ಲಿ ಶಕ್ತಿಯಿರುವುದು ಸಂಘಟಿತವಾಗಿರುವುದರಲ್ಲಿ ಎಂದಂತೆ ಒಂದೇ ಉದ್ದೇಶದಿಂದ ಕೆಲಸ ಮಾಡುತ್ತಿರುವ ಈ ಖಾಸಗಿ ರಾಮಕೃಷ್ಣ ಸಂಸ್ಥೆಗಳು ಬೇಲೂರು ಮಠದ ರಾಮಕೃಷ್ಣ ಮಿಷನ್ ಸಂಸ್ಥೆಯ ನಿಯಮಗಳನ್ನು ಅನುಸರಿಸುತ್ತ, ಅಲ್ಲಿಂದ ಬೆಂಬಲ ಪಡೆದು ರಾಮಕೃಷ್ಣರ 'ಸ್ಥೂಲ ಶರೀರಕ್ಕೆ' ಬೆಂಬಲವನ್ನು ಕೊಟ್ಟು, ತಮ್ಮ ಕಾರ್ಯಕ್ರಮಗಳ ಮೂಲಕ ಶ್ರೀರಾಮಕೃಷ್ಣರ ಯುಗಧರ್ಮದ ಪ್ರಚಾರವನ್ನು ಭವ್ಯವಾಗಿ, ತೀವ್ರವಾಗಿ ಮಾಡಬೇಕಾಗಿದೆ. ಹೀಗೆ ಒಂದುಗೂಡಿ ನಾವೆಲ್ಲ ಸಾಗಬೇಕು, ಕೆಲಸ ಮಾಡಬೇಕು ಎಂಬುದಕ್ಕಾಗಿ ಈ ಭಕ್ತಸಮ್ಮೇಳನ ನಡೆಯುತ್ತಿದೆ.

ನಿಮ್ಮಗಳಿಗೆ ಈ ಭಕ್ತ ಸಮ್ಮೇಳನದ ಮೂಲಕ ನಿಮಗೆ ಎಲ್ಲ ರೀತಿಯ ಸಫಲತೆ, ಶಕ್ತಿ ಮತ್ತು ಸ್ಫೂರ್ತಿಯನ್ನು ದಿವ್ಯತ್ರಯರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

✪

**ಶ್ರೀ ಸ್ವಪನ್ ಅಧಿಕಾರಿ—ಈತ ಒಬ್ಬ ಸಾಮಾನ್ಯ ರಿಕ್ಷಾ ಚಾಲಕ. ಪಶ್ಚಿಮ ಬಂಗಾಳದ ಬಾಲೂರ್‌ಘಾಟ್‌ನಲ್ಲಿರುವ ಈತ ತನ್ನ ರಿಕ್ಷಾ ತೊಳೆಯುತ್ತಿದ್ದಾಗ ೪,೩೦೦ ರೂಪಾಯಿಗಳಿದ್ದ ಒಂದು ಲಕೋಟೆಯನ್ನು ಕಂಡು, ಅದನ್ನು ವಾರಸುದಾರರಿಗೆ ತಲುಪಿಸಲು ಪ್ರಯತ್ನಿಸಿದ. ಪೋಲೀಸರಿಗೆ ತಿಳಿಸಿದ, ಪಂಚಾಯತಿಯ ಸದಸ್ಯರಿಗೂ ತಿಳಿಸಿದ. ಆದರೆ ಆ ಹಣ ಯಾರದು ಎಂದು ಕೊನೆಗೂ ತಿಳಿಯಲಾಗಲಿಲ್ಲ. ತನಗಾಗಿ ಆ ಹಣವನ್ನು ಉಪಯೋಗಿಸಿಕೊಳ್ಳಲು ಬಯಸದೆ ಅದರಿಂದ ಕೆಲವು ಪುಸ್ತಕಗಳನ್ನು ಕೊಂಡುಕೊಂಡು ಬಡ ವಿದ್ಯಾರ್ಥಿಗಳಿಗೆ ನೀಡಿದ. ಆಗ ಅವರ ಮುಖದಲ್ಲಿ ಅರಳಿದ ನಗುವನ್ನು ಕಂಡು ಅವನ ಹೃದಯ ತುಂಬಿ ಬಂದಿತು. ತಾನು ಕೇವಲ ನಾಲ್ಕನೇ ತರಗತಿಯವರೆಗೆ ಓದಿದ್ದರೂ ಇತರ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ತೀರ್ಮಾನಿಸಿದ. ಅವರು ವಿದ್ಯೆಯನ್ನು ಗಳಿಸಿ, ಸ್ವಾವಲಂಬಿಗಳಾಗುವಂತೆ ಮಾಡಬೇಕು ಎಂಬ ಹೆಬ್ಬಯಕೆ ಅವನನ್ನು ಕಾಡತೊಡಗಿತು. ಅಂದಿನಿಂದ ಪ್ರಾರಂಭವಾಯಿತು ಅವನ ಸೇವಾಕಾರ್ಯ. ತನ್ನ ಸಂಸಾರದ ಮೂರು ಸದಸ್ಯರಿಗೆ ಒಂದು ದಿನಕ್ಕೆ ಬೇಕಾಗುವ ಐವತ್ತು ರೂಪಾಯಿಗಳನ್ನು ಇಟ್ಟುಕೊಂಡು ಹೆಚ್ಚಾಗಿ ಬಂದದ್ದನ್ನೆಲ್ಲ ಕೂಡಿಡಲು ಪ್ರಾರಂಭಿಸಿದ ಆತ. ಪ್ರತಿ ವರ್ಷದ ಕೊನೆಯಲ್ಲಿ ವಿವಿಧ ಶಾಲೆಗಳಿಂದ ಬಡ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಗ್ರಹಿಸಿ ಅವರಿಗೆ ಬೇಕಾಗುವ ಶಿಕ್ಷಣ ಸಾಮಗ್ರಿಗಳನ್ನು ಒದಗಿಸುತ್ತಾ ಬಂದಿದ್ದಾನೆ. ಅನೇಕ ಮಕ್ಕಳನ್ನು ಇದು ಒಳಗೊಳ್ಳುವುದರಿಂದ ನಗರದ ಕಲೆಕ್ಟರರ ಮೂಲಕ ಇದನ್ನು ಹಂಚಲು ಪ್ರಾರಂಭಿಸಿದ. ಸ್ವಪನ್ ಮತ್ತು ಅವನ ಮನೆಯವರು ಇದನ್ನು ಮನಃಪೂರ್ವಕವಾಗಿ ಮಾಡುತ್ತಿದ್ದು ತಮ್ಮ ಆವಶ್ಯಕತೆಗಳಿಗೆ ಮಾತ್ರ ಹಣ ಬಳಸಿ, ದುಂದು ವೆಚ್ಚವನ್ನು ಸಂಪೂರ್ಣವಾಗಿ ತ್ಯಜಿಸಿದ್ದಾರೆ. ಇತರರ ಸುಖದಲ್ಲೇ ತಮ್ಮ ಸುಖವನ್ನು ಕಾಣುವ ವಿಶಾಲ ಮನೋಭಾವನೆಯನ್ನು ಬೆಳೆಸಿಕೊಂಡಿದ್ದಾರೆ. ಜೂನ್ ೩, ೨೦೦೫ರಂದು ಇನ್ನೂರು ಜನ ಬಡ ವಿದ್ಯಾರ್ಥಿಗಳು ೪೦,೦೦೦ ರೂಪಾಯಿ ಬೆಲೆಬಾಳುವ ಶಿಕ್ಷಣ ಸಾಮಗ್ರಿಗಳನ್ನು ಇವರಿಂದ ಪಡೆದುಕೊಂಡರು. ಹನ್ನೆರಡು ವರ್ಷಗಳಿಂದ ಸತತವಾಗಿ ತನ್ನ ಊರಿನ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಲೇಖನಿ ಇತ್ಯಾದಿಗಳನ್ನು ನೀಡಿ ಶಿಕ್ಷಣದ ಪ್ರಗತಿಗಾಗಿ ಈತನು ಸಲ್ಲಿಸಿರುವ ಗಮನಾರ್ಹ ಸೇವೆಯನ್ನು ಗುರುತಿಸಿ ಬಾಲೂರ್ ಘಾಟ್‌ನಲ್ಲಿನ ಶ್ರೀರಾಮಕೃಷ್ಣ ಆಶ್ರಮ ೨೦೦೫ರಲ್ಲಿ ಇವರನ್ನು ಸನ್ಮಾನಿಸಿತು. ಜಿಲ್ಲೆಯ ನ್ಯಾಯಾಧೀಶರು ಹಾಗೂ ಸೇವಾಕಾರ್ಯಕರ್ತರ ಸಮ್ಮುಖದಲ್ಲಿ ಈ ಕಾರ್ಯಕ್ರಮ ನೆರವೇರಿತು. ಸನ್ಮಾನವನ್ನು ಸ್ವೀಕರಿಸುವಾಗಲೂ ಈತ ಎಲ್ಲರಿಂದ ಕೇಳಿಕೊಂಡಿದ್ದು ಸಾಯುವ ತನಕ ಅವಿರತವಾಗಿ ಈ ಸೇವೆ ಮುಂದುವರಿಸಲು ಸಾಧ್ಯವಾಗುವಂತೆ ಆಶೀರ್ವಾದ! ಒಬ್ಬ ಶ್ರೀಸಾಮಾನ್ಯನು ಇತರರಿಗೆ ಶಿಕ್ಷಣವನ್ನು ಒದಗಿಸುವ ಅಸಾಧಾರಣ ಸೇವೆಯ ಮೂಲಕ, ಶಿಕ್ಷಣದ ಮೂಲ ಉದ್ದೇಶವನ್ನೇ ಸಾರ್ಥಕ ಪಡಿಸಿದ್ದಾನೆ.**

(ಸೌಜನ್ಯ : ಪ್ರಬುದ್ಧ ಭಾರತ, ಜನವರಿ, ೨೦೦೬)